ಸಿ.ಸಿ. ನಂ. 184-2012 PW-3

ದಿನಾಂಕಃ 04-09-2023 ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು .

ಪಾಟೀ ಸವಾಲು ಃ ಆರೋಪಿ ಪರವಾಗಿ ಶ್ರೀ. ಎಸ್.ಕೆ.ಎಸ್ . ವಕೀಲರಿಂದಃ

1. ನಾನು ಸುಮಾರು 16 ವರ್ಷಗಳಿಂದ ನಿರಂತರವಾಗಿ ಅಬಕಾರಿ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದೇನೆ. ಸುಮಾರು 20-25 ಆನಮೋಡ ತನಿಖಾ ಠಾಣೆಗೆ ಪ್ರಕರಣಗಳಲ್ಲಿ ನಾನು ಸಾಕ್ಷ್ಯವನ್ನು ನುಡಿದಿರುತ್ತೇನೆ ಎಂದರೆ ಸರಿ. ಚಾಸಾ 2 ರವರ ಪರಿಚಯ ಇದೆ. ಅವರು ಸಹ ಸುಮಾರು 16 ವರ್ಷಗಳಿಂದ ಅಬಕಾರಿ ಇಲಾಖೆಯಲ್ಲಿ ಕೆಲಸ ಮಾಡುತ್ತಿರುತ್ತಾರೆ.

2. ಕೊನೆಯದಾಗಿ ಈ ನ್ಯಾಯಾಲಯದಲ್ಲಿ ಯಾವ ಪ್ರಕರಣದಲ್ಲಿ ಯಾವ ದಿನಾಂಕದಂದು ಸಾಕ್ಷ್ಯ ನುಡಿದಿರುತ್ತೇನೆ ಎಂದು ನನಗೆ ನೆನಪಿಲ್ಲಾ. ನಾವು ಬೆಳಿಗ್ಗೆ 10-00 ರಿಂದ ರಾತ್ರಿ 7-00 ಗಂಟೆಗೆಯವರೆಗೆ ಹಾಗೂ ರಾತ್ರಿ 7 ರಿಂದ ಬೆಳಿಗ್ಗೆ 10 ಗಂಟೆಯವರೆಗೆ 12 ಗಂಟೆಯ ಅವದಿಯ ಕೆಲಸ ಇರುತ್ತದೆ. ನಾನು ಹಾಗೂ ಚಾಸಾ 3 ರವರು ಒಂದೇ ಕರ್ತವ್ಯದ ಪಾಳಿಯಲ್ಲಿ ಕೆಲಸ ಮಾಡುತ್ತೇವೆ ಎಂದರೆ ಸರಿ. ಪ್ರಸ್ತುತ ಪ್ರಕರಣದ ದಾಖಲಾಗುವ ನಾನು ಹಾಗೂ ಚಾಸಾ 3 ರವರು ಅಬಕಾರಿ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದೇವು. ನನಗೆ ಕನ್ನಡ ಓದಲು ಬರೆಯಲು ಬರುತ್ತದೆ. ನಾನು 4 ನೇ ತರಗತಿಯವರೆಗೆ ಮರಾಠಿ ಭಾಷೆಯಲ್ಲಿ ಓದಿದೇನೆ.

3. ಪ್ರಕರಣದ ಮಾಹಿತಿಯನ್ನು ಚಾಸಾ 1 ರವರು ಸಂಜೆ 6-30 ಗಂಟೆಯ ಸಮಯಕ್ಕೆ ದೂರವಾಣಿಯ ಮುಖಂ ತರ ತಿಳಿಸಿರುತ್ತಾರೆ. ಆಗ ಆಗ ನಾನು ಮನೆಯಲ್ಲಿದ್ದೇನು. ನನ್ನ ಮನೆ ಚೆಕ್ಕ ಪೋಸ್ಟನಿಂದ ಸುಮಾರು 2-3 ಕಿ. ಮೀಟರ ದೂರದಲ್ಲಿದೆ. ಚಾಸಾ 2 ರವರು ಸಹ ಮನೆಯಲ್ಲಿದ್ದರು ಅವರ ಮನೆ 4-5 ಕಿ. ಮೀಟರ ದೂರದಲ್ಲಿದೆ. ಮಾಹಿತಿ ಸಿಕ್ಕ ಅರ್ಧ ಗಂಟೆಯ ಬಳಿಕಾ ನಾನು ತನಿಖಾ ಠಾಣೆಗೆ ಹೋರಗಿರುತ್ತೇನೆ. ನಾನು ಗೇಟನಿಂದ ಸ್ವಲ್ಪ ದೂರದಲ್ಲಿ ಚಾಸ 2 ರವರನ್ನು ಕಾಯ್ದು, ನಾವಿಬ್ಬರೂ ಸೇರಿ ಕೊಂಡು ತನಿಖಾ ಠಾಣೆಗೆ ಹೋಗಿರುತ್ತೇವೆ . ಚಾಸಾ 2 ರವರಿಗೆ ದೂರವಾಣಿ ಮೂಲಕ ಸರ್ಪಕ ಮಾಡಿರುವುದಿಲ್ಲ. ನಾನು ಹೋದ

ತನಿಖಾ ಠಾಣೆಯಲ್ಲಿ ಚಾಸಾ 1 ಹಾಗೂ ಚಾಸಾ 4 ಹಾಗೂ ಸಿಬ್ಬಂದಿಯವರು ಹಾಗೂ ಇಬ್ಬರು ದಿನಗೂಲಿ ನೌಕರರು ಕೆಲಸದಲ್ಲಿ ಇದ್ದರು. ಅವರ ಹೆಸರು ನನಗೆ ಗೊತ್ತಿಲ್ಲ. ಆಗ ತನಿಖಾ ಠಾಣೆಯಲ್ಲಿ ಸುಮರು 6 ಜನ ದಿನಗೂಲಿ ನೌಕರರು ಇದ್ದರು. ನಾವು ಹೋದಾಗ ಸಿಬ್ಬಂದಿಗಳು ವಾಹನಗಳನ್ನು ಪರಿಶೀಲನೆ ಮಾಡುತ್ತಿದ್ದು, ಅವುಗಳ ಸಂಖ್ಯೆ ನನಗೆ ಗೊತ್ತಿಲ್ಲ. ನಮ್ಮ ಹಾಜರಾತಿಯನ್ನು ಪಡೆದುಕೊಳ್ಳುವುದಿಲ್ಲ. ತಪಾಸಣೆ ಮಾಡುವ ವಾಹನಗಳ ಸಂಖೆಗಳನ್ನು ತೆಗೆದುಕೊಂಡು ವಹಿಯನ್ನು ನಿರ್ವಹಿಸಿಕೊಳ್ಳುತ್ತಾರೆ. ನಾವು ಹೋದ ಬಳಿಕಾ ಸುಮಾರು 10-12 ವಾಹನಗಳನ್ನು ತಪಾಸಣೆ ಮಾಡಿರುತ್ತೇವೆ. ಅವುಗಳ ಪೈಕಿ ಯಾವುದೇ ವಾಹನಗಳ ಸಂಖ್ಯೆಯನ್ನು ಹೇಳಲು ಆಗುವುದಿಲ್ಲ. ಪ್ರಕರಣದ ವಾಹನವನ್ನು ತಪಾಸಣೆ ಮಾಡುವ ಮುಂಚಿತವಾಗಿ ಯಾವ ವಾಹನಗಳನ್ನು ತಪಾಸಣೆ ಮಾಡಿದ್ದೇವು ಎಂದು ಹೇಳಲು ಆಗುವುದಿಲ್ಲ. ಪ್ರಕರಣದ ವಾಹನ ಬರುವ ಕಾಲಕ್ಕೆ ನಾನು ಬೇರೆ ವಾಹನವನ್ನು ತಪಾಸಣೆ ಮಾಡುತ್ತಿದ್ದೇನು. ಸದ್ರಿ ವಾಹನ ಸಂಖೆಯನ್ನು ಹೇಳಲು ಆಗುವುದಿಲ್ಲ. ಪರಕರಣದ ವಾಹನ ಬರುವ ಅರ್ಧ ಗಂಟೆಯ ಬಳಿಕಾ ನಾನು ತಪಾಸಣೆ ಮಾಡುತ್ತಿದ್ದ ವಾಹನವನ್ನು ತಪಾಸಣೆ ಮಾಡಿರುತ್ತೇನೆ. ಅರ್ಧ ಗಂಟೆಯಲ್ಲಿ ಎಷ್ಟು ವಾಹನಗಳು ಬಂದಿರಬಹುದು ಎಂದು ನೆನಪಿಲ್ಲಾ. ನಾವು ಕೈ ಸನ್ನೆ ಮಾಡಿ ಚಾಸಾ 2 ರವರು ವಾಹನವನ್ನು ನಿಲ್ಲಿಸಿರುತ್ತಾರೆ. ವಾಹನವನ್ನು ಚಾಸ 2 ರವರು ಹತ್ತಿ ವಾಹನವನ್ನು ತಪಾಸಣೆ ಮಾಡಿರುತ್ತಾರೆ . ನಾನು ಆಗ ಬೇರೆ ವಾಹನವನ್ನು ತಪಾಸಣೆ ಮಾಡುತ್ತಿದ್ದೇನು. ಹಾಗಾಗಿ ಚಾಸಾ 2 ರವರು ವಾಹನದ ಯಾವ ಭಾಗಗಳನ್ನು ಪರಿಶೀಲನೆ ಮಾಡಿರುತ್ತಾರೆಂದು ನನಗೆ ಗೊತ್ತಿಲ್ಲ ಎಂದರೆ ಸರಿ. ಅಂತೆಯೇ ನಾನು ಪ್ರಕರಣದ ವಾಹನವನ್ನು ಪರಿಶೀಲನೆ ಮಾಡಿಲ್ಲ ಎಂದರೆ ಸರಿ. ಚಾಸಾ 2 ರವರು ನನಗೆ ಹೇಳಿದ ಮೇರೆಗೆ ತಪಾಸಣೆ ಬಗ್ಗೆ ತಿಳಿದು ಬಂದಿರುತ್ತದೆ. ಚೀಲವನ್ನು ಹಿಂಬದಿಗೆ ತಂದಿಟ್ಟ ನಂತರ ತಿಳಿದು ಬಂದಿರುತ್ತದೆ. ಗೋಣಿ ಚೀಲದ ಉದ್ದ ಅಗಲವನ್ನು ಹೇಳಲು ಆಗುವುದಿಲ್ಲ. ಅದರ ವಮೇಲೆ ಇದ್ದ ಬರವಣಿಗೆಯನ್ನು ಹೇಳಲು ಆಗುವುದಿಲ್ಲ. ಎಲ್ಲಾ ಗೋಣಿ ಚೀಲಗಳು ಒಂದೇ ತರಹ ಇದ್ದವು. ಒಂದು ಚೀಲದಲ್ಲಿ 3-4 ಬಾಕ್ಸಗಳು ಇದ್ದಿರಬಹುದು. ಯಾವ ಬ್ರಾಂಡಿನ ಬಾಕ್ಸಗಳು ಯಾವ ಚೀಲದಲ್ಲಿ ಇದ್ದವು ಎಂದು ಹೇಳಲು ಆಗುವುದಿಲ್ಲ. ವಾಹನದ ಮುಂಭಾಗದಲ್ಲಿ ಅಶೋಕ ಲೈಲೆಂಡ್ ಎಂದು ಬರೆಯಲಾಗಿತ್ತು. ವಾಹನ ಮೇಲೆ ಯಾವುದೇ ಹೆಸರು

ಬರೆದಿದ್ದು ನನಗೆ ನೆನಪಿಲ್ಲಾ. ನಾನು ಖುದ್ದಾಗಿ ಬಾಟಲಿಗಳನ್ನು ತೆಗೆದು ಮದ್ಯ ಇರುವ ಬಗ್ಗೆ ಪರಿಶೀಲನೆ ಮಾಡಿಲ್ಲ. ಚಾಸಾ 1 ರವರು ಬಾಟಲಿಗಳ ಸೀಲನ್ನು ತೆಗೆದು ಪರಿಶೀಲನೆ ಮಾಡಿರುವ ಬಗ್ಗೆ ನನಗೆ ಗೊತ್ತಿಲ್ಲ. ಯಾವ ಬಾಕ್ಸಗಳಿಂದ ಯಾವ ಮುದ್ದೆ ಮಾಲಗಳನ್ನು ತೆಗೆಯಲಾಗಿದೆ ಎಂದು ನನಗೆ ಹೇಳಲು ಆಗುವುದಿಲ್ಲ. ಅನೇಕ ಪ್ರಕರಣಗಳಲ್ಲಿ ನಮ್ಮ ಮಾದರಿ ಸಹಿಗಳನ್ನು ನಮ್ಮ ಇಲಾಖೆಯವರು ತೆಗೆದುಕೊಂಡು ಇಟ್ಟಿರುತ್ತಾರೆ ಎಂದರೆ ಸರಿ. ಪಂಚನಾಮೆಯಲ್ಲಿ ಬರೆದ ಅಂಶಗಳು ನನಗೆ ಓದಲು ಬರುವುದದಿಲ್ಲ ಎಂದರೆ ಸರಿ. ಅದರಲ್ಲಿ ಬರೆದ ವಿಷಯಗಳು ನನಗೆ ಗೊತ್ತಿಲ್ಲ ಎಂದರೆ ಸರಿ.

4. ಚಾಸಾ 1 ರವರು ಹೂಡಿದ ಸುಳ್ಳು ಪ್ರಕರಣಕ್ಕೆ ಸಂಬಂಧಿಸಿದಂತೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹೇಳಿದ ಸಮಯಕ್ಕೆ ಯಾವುದೇ ವಾಹನ ಬಂದಿಲ್ಲ, ತಪಾಸಣೆ ಮಾಡಿಲ್ಲ ಎಂದರೆ ಸರಿಯಲ್ಲ. ಆರೋಪಿಗೂ ಹಾಗೂ ಈ ಪ್ರಕರಣಕ್ಕೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ . ನನ್ನ ಸಮಕ್ಷಮ ಯಾವುದೇ ಪಂಚನಾಮೆ ಮಾಡಿಲ್ಲ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ಯಾವುದೇ ಮುದ್ದೆಮಾಲಗಳನ್ನು ಜಪ್ತ ಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಆರೋಪಿಗೂ ಹಾಗೂ ಮುದ್ದೆ ಮಾಲಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

**<u>ಪಾಟೀ ಸವಾಲು 2 ನೇ ಆರೋಪಿ ಪರ ಶ್ರೀ. ವಿ.ಆರ್.ಎಚ್ ವಕೀಲರಿಂದ.</u>**

1 ನೇ ಆರೋಪಿ ಪರ ಪಾಟೀಸವಾಲನ್ನು ಅಳವಡಿಸಿಕೊಂಡಿರುತ್ತಾರೆ.

ಮರು ವಿಚಾರಣೆ ಇಲ್ಲಾಃ

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಲಾಯಿತು)

ಓ.ಹೇ.ಕೇ. ಸರಿ ಇದೆ

ದಿವಾಣಿ ನ್ಯಾಯಾಧೀಶರು ಮತ್ತು

ಪ್ರ.ದ.ನ್ಯಾ ದಂ., ದಾಂಡೇಲಿ